ನಗೆದಿನ ವಿಶೇಷ

# ಎಡವಟ್ಟೋ ಎಡವಟ್ಟು!



■ ಪ್ರಭಾಮಣಿ ನಾಗರಾಜ

ನಮ್ಮ ಹಳ್ಳಿಯ ಜನ ಅನ್ವರ್ಥನಾಮ ಇಡುವುದರಲ್ಲಿ ಬಹಳ ಪ್ರವೀಣರಿದ್ದರು. ಹೊಸಬರನ್ನು ಕಂಡಾಗ ಅವರ ಹೆಸರೇನು ಎಂದು ಕೇಳುವ ಗೋಜಿಗೂ ಹೋಗದೇ ಅವರಲ್ಲಿಯ ದೈಹಿಕ ಅಥವಾ ವರ್ತನಾ ಪ್ರಧಾನ ಗೋಚರಾಂಶವನ್ನು ಗುರುತಿಸಿ ತಕ್ಷಣವೇ ಒಂದು ಅನ್ವಯನಾಮವನ್ನಿಟ್ಟು ಕರೆದೇಬಿಡುತ್ತಿದ್ದರು. ಈ ರೀತಿಯ ನಡೆಯನ್ನು ನಮ್ಮ ಮನೆಯಲ್ಲಿ ಅನಾಗರಿಕವೆಂದು ಪರಿಗಣಿಸಿದ್ದರಿಂದ ಅದಕ್ಕೆ ಆಸ್ಪದವಿರಲಿಲ್ಲ. ಆದರೂ ನಮ್ಮ ಮನೆಯ ಹಿರಿಯ ಮೇಲ್ ಮಕ್ಕಳು ಕದ್ದುಮುಚ್ಚಿ ಇಂಥಾ ಹೆಸರುಗಳನ್ನಿಟ್ಟು ಕೀಟಲೆ ಮಾಡುತ್ತಿದ್ದುದು ನಡೆದೇ ಇತ್ತು. ಇದಕ್ಕೆಲ್ಲಾ ಬಲಿಪಶುವಾಗುತ್ತಿದ್ದುದು ನಿರುಪದ್ರವಿ ಜೀವಿಯಾದ ನಾನೇ ಆದ್ದರಿಂದ ಅನಿವಾರ್ಯವಾಗಿ ನಾನು ಈ ಕೋಟಲೆಯನ್ನು ಅನುಭವಿಸಲೇಬೇಕಿತ್ತು. ಎಡವಟ್ಟ, ಎಂಗರವಟ್ಟ, ಮೊದ್ದು, ಪೆಂಗ, ಪೆಗ್ಗೆ ಮುಂತಾಗಿ ಸಂದರ್ಭಾನುಸಾರ ಕರೆಯುವುದೆಂದರೆ ಅವರಿಗೆ ಖುಷಿಯೋ ಖುಷಿ. ಹೀಗೆ ಬಾಲ್ಯದಿಂದಲೇ ಪಾರಂಭವಾದ ನನ್ನ ಎಡವಟ್ಟುತನ ನನ್ನೊಂದಿಗೇ ಬೆಳೆಯುತ್ತಾ ಸುತ್ತಿನವರಿಗೆಲ್ಲಾ ಆಗಾಗ ಮನರಂಜನೆ ಉಂಟುಮಾಡುತ್ತಿತ್ತು.

ಚಿಕ್ಕಂದಿನಿಂದಲೇ ಅನಿವಾರ್ಯ ಎಡವಟ್ಟಾಂಕಿತಳಾಗಿದ್ದ ನನಗೆ ಬಹಳ ದಿನಗಳ ನಂತರ ಎಡವಟ್ಟು ಅಂದರೆ ಅರ್ಥವೇನು ಎನ್ನುವ ಸಮಸ್ಯೆ ಕಾಡಲಾರಂಭಿಸಿತು. ಎಡವಟ್ಟು ಪದದ ವ್ಯುತ್ಪತ್ತಿಯನ್ನು ಶೋಧಿಸಿದಾಗ ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರ ವಿಶ್ಲೇಷಣೆಯಂತೆ, 'ಎಡ' ಮತ್ತು 'ಪಡು' ಎರಡು ಪದಗಳು ಸೇರಿ ಎಡವಟ್ಟು ಆಗಿದೆ ಎಂದು ತಿಳಿದುಬಂತು.

ಎಡ ಅಂದರೆ ಎಡಗಡೆ, ಎಡಗೈಯಿಂದ ಒಳ್ಳೆಯ ಕೆಲಸ ಮಾಡಬಾರದು ಅಂತ ಅಜ್ಜಿ ಆಗಾಗ ಹೇಳ್ತಿದ್ದರು. ಬೆಳಿಗ್ಗೆ ಏಳುವಾಗಿನಿಂದಲೇ ಎಡಮಗ್ಗುಲಲ್ಲಿ ಏಳಬಾರದು ಎನ್ನುವುದರಿಂದ ಪ್ರಾರಂಭವಾಗಿ, ಎಡಗೈಲಿ ಊಟ ಮಾಡಬಾರದು, ಎಡಗೈಲಿ ಬರೆಯಬಾರದು, ದೇವರಿಗೆ ಪ್ರದಕ್ಷಿಣೆಯನ್ನೂ ಎಡಗಡೆಯಿಂದ ಮಾಡಬಾರದು ಮುಂತಾಗಿ ಎಡ ನಿಷೇಧಗಳ ಲಿಸ್ಟ್ ಮುಂದುವರಿಯುತ್ತಿತ್ತು. ಇನ್ನು 'ಪಡು' ಅನ್ನೋದು ಪಟ್ಟು ರೂಪ ಪಡೆದು, ಎಡ ಮತ್ತು ಪಟ್ಟು ಸೇರಿ ಸಮಾಸವಾಗುವಾಗ ಎಡವಟ್ಟು ಆಗಿದೆ! ಅಬ್ಬಬ್ಬಾ ಎಡವಟ್ಟೇ! ಹಾಗಾಗಿ ಎಡವಟ್ಟು ಅಂದರೆ ಎಡಕ್ಕೆ ಬಿದ್ದ, ಕ್ರಮ ತಪ್ಪಿದ, ಸರಿ ಹೋಗದ... ಇತ್ಯಾದಿ ಅರ್ಥ ಬರುತ್ತದೆ ಎಂದು ತಿಳಿಯಿತು. ಈ ಹಾಳು ಹಿರೀಹುಡುಗರು ಎಡವರಿಯದ ಪಾಪದ ಜೀವಿಯಾದ ನನ್ನ ತಲೆಗೆ ಏಕೆ ಈ ಹುಳವನ್ನು ಬಿಟ್ಟರೋ ಕಾಣೆ. ನಾಲ್ಕಕ್ಷರ ಕಲಿತ ನಂತರ ಎಲ್ಲೆಲ್ಲೂ ನನಗೆ ಎಡವಟ್ಟೇ ಕಾಣಲಾರಂಭಿಸಿತು.

ಮೆಡಿಸಿನ್ ತಿಂದು ಎಡವಟ್ಟಾಗಿ ಮಹಿಳೆಯೊಬ್ಬರ ನಾಲಿಗೆ ಕಪ್ಪು ಬಣ್ಣಕ್ಕೆ ತಿರುಗಿದ್ದು ಮಾತ್ರವಲ್ಲದೆ, ನಾಲಿಗೆಯಲ್ಲಿ ಪೂರ್ತಿ ಕೂದಲು ಬೆಳೆಯಿತೆನ್ನುವ ವಾರ್ತೆಯಿಂದ ಯಾವುದೇ ಮೆಡಿಸಿನ್ ತೆಗೆದುಕೊಳ್ಳುವುದಕ್ಕೂ ಹಿಂದೆ ಮುಂದೆ ನೋಡುವಂತಾಯ್ತು.

ಬ್ಯಾಂಕ್ ಸಿಬ್ಬಂದಿ ಎಡವಟ್ಟಿನಿಂದ ಖಾತೆಗೆ 6,000 ರೂಪಾಯಿ ಬದಲು 6 ಲಕ್ಷ ರೂಪಾಯಿ ಜಮಾ ಆಯ್ತು ಎನ್ನುವ ಸುದ್ದಿಯನ್ನು ಓದಿದಾಗ ನನಗಾದರೂ ಆ ಅದೃಷ್ಟ ಖುಲಾಯಿಸಿದ್ದರೆ ಎನಿಸುವ ಬದಲು, ಸದ್ಯ, ನಾನು ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿಲ್ಲವಲ್ಲ ಎಂದು ಸಾರ್ವಜನಿಕ ಎಡವಟ್ಟಾಂಕಿತದಿಂದ ಪಾರಾದ ಬಗ್ಗೆ ಸಮಾಧಾನದ ನಿಟ್ಟುಸಿರಿಟ್ಟೆ.

ತಾನು ಧರಿಸಿದ ದುಪಟ್ಟಾದಲ್ಲಿದ್ದ ಬೆಲೆಯ ಟ್ಯಾಗ್ ತೆಗೆಯುವುದನ್ನು ಮರೆತುಹೋದ ಎಡವಟ್ಟಿನಿಂದ ಪ್ರಸಿದ್ಧ ನಟಿಯೊಬ್ಬರು ಟ್ರೋಲ್ ಆದದ್ದನ್ನು ನೋಡಿದಾಗ ನನಗೆ ಒಮ್ಮೆ ಪರಮ ಎಡವಟ್ಟಳಾದ ನಾನು ಉಲ್ಟಾ ಸೀರೆಯುಟ್ಟು ದಿನವಿಡೀ ಡ್ಯೂಟಿ ಮುಗಿಸಿ ಹಿಂತಿರುಗಲು ಬಸ್ ಹತ್ತುವಾಗ ಸೆರಗನ್ನು ಹಿಡಿದ ಕೈಗೆ ಸೀರೆಯ ಫಾಲ್ ಸಿಕ್ಕಿ ಕಕ್ಕಾಬಿಕ್ಕಿಯಾದದ್ದು ನೆನಪಾಯ್ತು!

'ಎಡವಟ್' ಎಂಬ ಶಬ್ದ ಕಿವಿಯ ಮೇಲೆ ಬಿದ್ದಾಕ್ಷಣವೇ ನನ್ನ ಶ್ರವಣೇಂದ್ರಿಯಗಳು